ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	956 (1022)
ಸದಸ್ಯರ ಹೆಸರು	:	ಶ್ರೀ ಆರ್. ಪ್ರಸನ್ನಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾಗಿದ್ದ ದಿನಾಂಕ	:	(29-09-2020)
ಉತ್ತರಿಸುವ ಸಚಿವರು	:	ಮಾನ್ಯ ನಗರಾಭಿವೃದ್ಧಿ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದ ಯಾವ ಯಾವ ನಗರಪಾಲಿಕೆ, ನಗರಸಭೆಗಳು ಸ್ಮಾರ್ಟ್ ಸಿಟಿ ಯೋಜನೆಗೆ ಒಳಪಟ್ಟಿದೆ (ಸಂಪೂರ್ಣ ವಿವರ ನೀಡುವುದು)	ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಸ್ಮಾರ್ಟ್ ಸಿಟಿ ಅಭಿಯಾನದಡಿ ರಾಜ್ಯದ ಈ 7 ಮಹಾನಗರಗಳು ಆಯ್ಕೆಯಾಗಿರುತ್ತವೆ. 1) ಬೆಳಗಾವಿ 2) ದಾವಣಗೆರೆ 3) ಹುಬ್ಬಳ್ಳಿ-ಧಾರವಾಡ 4) ಮಂಗಳೂರು 5) ಶಿವಮೊಗ್ಗ 6) ತುಮಕೂರು ಮತ್ತು 7) ಬೆಂಗಳೂರು.
ಆ	ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿ ಯಾವ ಯಾವ ಕಾಮಗಾರಿಗಳನ್ನು ನಡೆಸಬೇಕೆಂದು ಸರ್ಕಾರ ಮಾನದಂಡವನ್ನು ವಿಧಿಸಿದೆ. (ವಿವರ ನೀಡುವುದು)	ಅಭಿಯಾನದ ಮಾರ್ಗಸೂಚಿಯಲ್ಲಿ 10 ವಿಶಾಲ ವರ್ಗಗಳನ್ನು ಸೂಚಿಸಿದ್ದು, ಅದರಂತೆ ಪ್ರಸ್ತಾಪಿಸುವ ಕಾಮಗಾರಿಗಳು ಈ ಕೆಳಕಂಡ ಯಾವುದಾದರೂ ವರ್ಗಗಳಿಗೆ ಸೇರಿರಬೇಕಾಗಿರುತ್ತದೆ. ನೀರು ಸರಬರಾಜು, ವಿದ್ಯುಚ್ಛಕ್ತಿ ಸರಬರಾಜು, ನೈರ್ಮಲ್ಯ ಹಾಗೂ ಘನತ್ಯಾಜ್ಯ ನಿರ್ವಹಣೆ, ಸಾರ್ವಜನಿಕ ಸಾರಿಗೆ, ಕೈಗೆಟುಕುವ ದರದಲ್ಲಿ ವಸತಿ, ಮಾಹಿತಿ ತಂತ್ರಜ್ಞಾನ ಮತ್ತು ಡಿಜಿಟಲೀಕರಣ ಮೂಲಕ ಸಾರ್ವಜನಿಕ ಸೇವೆ ಒದಗಿಸುವುದು, ಇ-ಆಡಳಿತ, ಸುಸ್ಥಿರ ಪರಿಸರ, ಸಾರ್ವಜನಿಕರ ಸುರಕ್ಷತೆ, ಆರೋಗ್ಯ ಮತ್ತು ಶಿಕ್ಷಣ- ಈ ವರ್ಗಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳಬಹುದಾಗಿರುತ್ತದೆ. ಮಾರ್ಗಸೂಚಿಯ ಸಂಬಂಧಿತ ಪುಟದ ಪ್ರತಿಯನ್ನು "**ಅನುಬಂಧ-1**" ರಲ್ಲಿ ನೀಡಿದೆ.
ಇ	ಸ್ಮಾರ್ಟ್ ಸಿಟಿ ಯೋಜನೆಯ ಕಾರ್ಯನಿರ್ವಹಣೆ ಬಗ್ಗೆ ಅತೃಪ್ತಿ ಇರುವುದರಿಂದ ಮತ್ತು ನಗರಪಾಲಿಕೆಗಳ ಸಹಕಾರ ಪಡೆಯಲು ವಿಫಲವಾಗಿರುವುದರಿಂದ ಈ ಯೋಜನೆಗಳನ್ನು ನಿಲ್ಲಿಸಲು ಸರ್ಕಾರದ ಮುಂದೆ ಪ್ರಸ್ತಾವನೆಗಳಿವೆಯೇ;	ಸ್ಮಾರ್ಟ್ ಸಿಟಿ ಅನುದಾನದಡಿ ಹಾಗೂ ಸಾರ್ವಜನಿಕ ಖಾಸಗಿ ಸಹಭಾಗಿತ್ವ ಯೋಜನೆಯಡಿ (PPP) ರಾಜ್ಯದ ಎಲ್ಲಾ 7 ನಗರಗಳಲ್ಲಿ ಕೈಗೊಂಡಿರುವ ಕಾಮಗಾರಿಗಳ ಪ್ರಗತಿಯ ವಿವರ ಈ ಕೆಳಗಿನಂತಿದೆ. (ರೂ. ಕೋಟಿಗಳಲ್ಲಿ)

ಕಾಮಗಾರಿಗಳ ವಿವರ	ಸಂಖ್ಯೆ	ಮೊತ್ತ
ಪೂರ್ಣಗೊಂಡ ಕಾಮಗಾರಿಗಳು	124	310.97
ಪ್ರಗತಿಯಲ್ಲಿರುವ ಕಾಮಗಾರಿಗಳು	334	5703.32
ಟೆಂಡರ್ ಹಂತದಲ್ಲಿರುವ ಕಾಮಗಾರಿಗಳು	51	1653.25
ವಿಸ್ತೃತ ಯೋಜನಾ ಹಂತದಲ್ಲಿರುವ ಕಾಮಗಾರಿಗಳು	28	974.69

		ಮುಂದುವರೆದು, ಯೋಜನೆಯಡಿ ಇಲ್ಲಿಯವರೆಗೆ ಎಲ್ಲಾ 7 ನಗರಗಳನ್ನು ಒಳಗೊಂಡಂತೆ, ಕೇಂದ್ರ ಸರ್ಕಾರವು ಒಟ್ಟು ರೂ.1374.00 ಕೋಟಿ ಹಾಗೂ ರಾಜ್ಯ ಸರ್ಕಾರವು ರೂ.1015.00 ಕೋಟಿ (ಒಟ್ಟು ರೂ.2389.00 ಕೋಟಿ) ಬಿಡುಗಡೆ ಮಾಡಿರುತ್ತದೆ ಹಾಗೂ ಈವರೆಗೆ ಒಟ್ಟು ರೂ.1374.00 ಕೋಟಿ ಆರ್ಥಿಕ ಪ್ರಗತಿ ಸಾಧಿಸಲಾಗಿರುತ್ತದೆ. ಮೇಲೆ ವಿವರಿಸಿರುವ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ, ಸ್ಮಾರ್ಟ್ ಸಿಟಿ ಯೋಜನೆಯ ರೂಪುರೇಷೆಗಳನ್ನು ಅಖೈರುಗೊಳಿಸಿ ಯೋಜನೆಗಳ ಅನುಷ್ಠಾನವನ್ನು ಸಮರ್ಪಕವಾಗಿ ಕೈಗೊಳ್ಳಲಾಗುತ್ತಿದೆ ಮತ್ತು ಕಾಲ ಕಾಲಕ್ಕೆ ಕೇಂದ್ರ ಸರ್ಕಾರ ನೀಡಿರುವ ಮಾರ್ಗಸೂಚಿಯಂತೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಸದರಿ ಯೋಜನೆಯನ್ನು ನಿಲ್ಲಿಸಲು ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆಗಳು ಇರುವುದಿಲ್ಲ.
ಈ	ರಾಜ್ಯದ ಯಾವ ಯಾವ ಮಹಾನಗರ ಪಾಲಿಕೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ; ಕುಡಿಯುವ ನೀರನ್ನು ಪೂರೈಸಲು ಸರ್ಕಾರದ ಮುಂದೆ ಇರುವ ಯೋಜನೆಗಳಾವುವು?	ರಾಜ್ಯದ 10 ಮಹಾನಗರಪಾಲಿಕೆಗಳ ಪೈಕಿ ದಾವಣಗೆರೆ ಮಹಾನಗರಪಾಲಿಕೆಯನ್ನು ಹೊರತುಪಡಿಸಿ ಉಳಿದ 9 ಮಹಾನಗರಪಾಲಿಕೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದಿಲ್ಲ. ವಿವರವನ್ನು **ಅನುಬಂಧ-2** ರಲ್ಲಿ ನೀಡಿದೆ. ಪೌರಾಡಳಿತ ನಿರ್ದೇಶನಾಲಯದ ವತಿಯಿಂದ ನಗರೋತ್ಥಾನ ಯೋಜನೆ, ಎಸ್ಎಫ್‌ಸಿ ಕುಡಿಯುವ ನೀರಿನ ಅನುದಾನ, ಅಮೃತ್ ಯೋಜನೆಯಡಿಯಲ್ಲಿ ಯೋಜನೆಗಳನ್ನು ರೂಪಿಸಿ ಕುಡಿಯುವ ನೀರನ್ನು ಪೂರೈಸಲಾಗುತ್ತಿದೆ. ವಿವರಗಳನ್ನು **ಅನುಬಂಧ-3, 4 ಮತ್ತು 5** ರಲ್ಲಿ ನೀಡಿದೆ. **<u>ಕೆಯುಐಡಿಎಫ್‌ಸಿ ವತಿಯಿಂದ:</u>** ಏಷ್ಯಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿಯಲ್ಲಿ (ಎನ್‌ಕೆಯುಎಸ್‌ಐಪಿ) ಬಳ್ಳಾರಿ ಮಹಾನಗರಪಾಲಿಕೆಯಲ್ಲಿ 24/7 ಕುಡಿಯುವ ನೀರಿನ ಕಾಮಗಾರಿಯನ್ನು ಕೈಗೊಂಡಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ ಹಾಗೂ ಕಾಮಗಾರಿಯನ್ನು ಪೂರ್ಣಗೊಳಿಸಲು ಗುತ್ತಿಗೆ ಅವಧಿಯನ್ನು 28/02/2021 ರವರೆಗೆ ವಿಸ್ತರಿಸಲಾಗಿದೆ. ಎಡಿಬಿ ನೆರವು ಮುಕ್ತಾಯವಾಗಿರುವುದರಿಂದ, ಯಾವುದೇ ಹೊಸ ಯೋಜನೆಗಳ ಪ್ರಸ್ತಾವನೆ ಇರುವುದಿಲ್ಲ. ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ" (ಕೆಯುಡಬ್ಲ್ಯೂಎಸ್‌ಎಂಪಿ) ಯಲ್ಲಿ ಬೆಳಗಾವಿ, ಕಲಬುರಗಿ ಮತ್ತು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗಳ

		ವ್ಯಾಪ್ತಿ ಪ್ರದೇಶಗಳಿಗೆ ವಿನ್ಯಾಸ-ನಿರ್ಮಾಣ-ಕಾರ್ಯಾಚರಣೆ ಮತ್ತು ನಿರ್ವಹಣೆ-ವರ್ಗಾವಣೆ (DBOT) ಮಾದರಿಯಲ್ಲಿ ಪರಿಣಾಮಕಾರಿ ವೆಚ್ಚದೊಳಗೆ ನಿರಂತರ (24/7) ಒತ್ತಡ ಸಹಿತ ನೀರು ಸರಬರಾಜು ವ್ಯವಸ್ಥೆಯ ಸುಸ್ಥಿರ ಉನ್ನತೀಕರಣ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಕಾಮಗಾರಿಯ ಅನುಷ್ಠಾನ ಅವಧಿ ಐದು ವರ್ಷವಾಗಿರುತ್ತದೆ. ನಂತರದ 7 ವರ್ಷಗಳ ಅವಧಿಯ ಕಾರ್ಯಾಚರಣೆ ಹಾಗೂ ನಿರ್ವಹಣೆ ಜವಾಬ್ದಾರಿಯನ್ನೂ Design-Build-Operate-Transfer (DBOT) ಗುತ್ತಿಗೆದಾರರು ನಿರ್ವಹಿಸಬೇಕಿರುತ್ತದೆ.

ಸಂಖ್ಯೆ:ನಅಇ 279 ಸಿಎಸ್ಎಸ್ 2020

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

956 (1022)

Smart Cities Mission

1. The Challenge of Urbanization

1.1 Cities are engines of growth for the economy of every nation, including India. Nearly 31% of India's current population lives in urban areas and contributes 63% of India's GDP (Census 2011). With increasing urbanization, urban areas are expected to house 40% of India's population and contribute 75% of India's GDP by 2030. This requires comprehensive development of physical, institutional, social and economic infrastructure. All are important in improving the quality of life and attracting people and investments to the City, setting in motion a virtuous cycle of growth and development. Development of Smart Cities is a step in that direction.

2. What is a 'smart city'

2.1 The first question is what is meant by a 'smart city'. The answer is, there is no universally accepted definition of a Smart City. It means different things to different people. The conceptualisation of Smart City, therefore, varies from city to city and country to country, depending on the level of development, willingness to change and reform, resources and aspirations of the city residents. A Smart City would have a different connotation in India than, say, Europe. Even in India, there is no one way of defining a Smart City.

2.2 Some definitional boundaries are required to guide cities in the Mission. In the imagination of any city dweller in India, the picture of a Smart City contains a wish list of infrastructure and services that describes his or her level of aspiration. To provide for the aspirations and needs of the citizens, urban planners ideally aim at developing the entire urban eco-system, which is represented by the four pillars of comprehensive development — institutional, physical, social and economic infrastructure. This can be a long term goal and cities can work towards developing such comprehensive infrastructure incrementally, adding on layers of 'smartness'.

2.3 In the approach to the Smart Cities Mission, the objective is to promote cities that provide core infrastructure and give a decent quality of life to its citizens, a clean and sustainable environment and application of 'Smart' Solutions. The focus is on sustainable and inclusive development and the idea is to look at compact areas, create a **replicable model which will act like a light house to other aspiring cities**. The Smart Cities Mission of the Government is a bold, new initiative. It is meant to set examples that can be replicated both within and outside the Smart City, catalysing the creation of similar Smart Cities in various regions and parts of the country.

2.4 The core infrastructure elements in a Smart City would include:

i. adequate water supply,

ii. assured electricity supply,

iii. sanitation, including solid waste management,

iv. efficient urban mobility and public transport,

v. affordable housing, especially for the poor,

vi. robust IT connectivity and digitalization,


vii. good governance, especially e-Governance and citizen participation,

viii. sustainable environment,

ix. safety and security of citizens, particularly women, children and the elderly, and

x. health and education.

2.5 As far as Smart Solutions are concerned, an illustrative list is given below. This is not, however, an exhaustive list, and cities are free to add more applications.



2.6 Accordingly, the purpose of the Smart Cities Mission is to drive economic growth and improve the quality of life of people by enabling local area development and harnessing technology, especially technology that leads to Smart outcomes. Area-based development will transform existing areas (retrofit and redevelop), including slums, into better planned ones, thereby improving liveability of the whole City. New areas (greenfield) will be developed around cities

ಅನುಬಂಧ- 2

1) ಬೆಳಗಾವಿ ಮಹಾನಗರ ಪಾಲಿಕೆ:
ಬೆಳಗಾವಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಕಂಡುಬಂದಿರುವುದಿಲ್ಲ. ಮುಂದುವರೆದು 24/7 ನಿರಂತರ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಕೆ.ಯು.ಡಬ್ಲ್ಯೂ.ಎಸ್. & ಡಿ.ಬಿ ವತಿಯಿಂದ ಕೈಗೆತ್ತಿಕೊಂಡಿದ್ದು ಯೋಜನೆಯು ಪ್ರಗತಿ ಹಂತದಲ್ಲಿರುತ್ತದೆ ಎಂದು ಆಯುಕ್ತರು, ಬೆಳಗಾವಿ ಮಹಾನಗರಪಾಲಿಕೆ ರವರು ವರದಿ ಮಾಡಿರುತ್ತಾರೆ.

2) ಕಲಬುರಗಿ ಮಹಾನಗರ ಪಾಲಿಕೆ:
ಕಲಬುರಗಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದಿಲ್ಲ. ಕಲಬುರಗಿ ನಗರಕ್ಕೆ 24/7 ಯೋಜನೆಯಡಿಯಲ್ಲಿ ರೂ.836.00 ಕೋಟಿಗಳಲ್ಲಿ ಕಾಮಗಾರಿಯನ್ನು ಕೆ.ಯು.ಐ.ಡಿ.ಎಫ್.ಸಿ. ವತಿಯಿಂದ ಕೈಗೆತ್ತಿಕೊಳ್ಳಲಾಗುತ್ತಿದೆ ಎಂದು ಆಯುಕ್ತರು, ಕಲಬುರಗಿ ಮಹಾನಗರಪಾಲಿಕೆ ರವರು ವರದಿ ಮಾಡಿರುತ್ತಾರೆ.

3) ಮೈಸೂರು ಮಹಾನಗರ ಪಾಲಿಕೆ:
ಮೈಸೂರು ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿ ಪ್ರಸ್ತುತ ಕುಡಿಯುವ ನೀರಿನ ಸಮಸ್ಯೆ ಇರುವುದಿಲ್ಲ. ಪ್ರಸ್ತುತ ಬೆಳಗೊಳ, ಮೇಳಾಪುರ, ಕಬಿನಿ ಹಾಗೂ ಹೊಂಗಳ್ಳಿ ಯೋಜನೆಗಳ 2ನೇ ಹಾಗೂ 3ನೇ ಹಂತದ ಕುಡಿಯುವ ನೀರನ್ನು ಪೂರೈಸಲಾಗುತ್ತಿದೆ. ಹೆಚ್ಚುವರಿಯಾಗಿ ಅಮೃತ್ ಯೋಜನೆಯಡಿಯಲ್ಲಿ ಎಲ್ಲಾ ನೀರು ಸರಬರಾಜು ಮೂಲ ಸ್ಥಾವರಗಳ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವ ಕಾಮಗಾರಿಯನ್ನು ಕ.ನ.ನೀಸ. & ಒ.ಚ. ಮಂಡಳಿಯಿಂದ ಕೈಗೊಳ್ಳಲಾಗಿರುತ್ತದೆ ಎಂದು ಆಯುಕ್ತರು, ಮೈಸೂರು ಮಹಾನಗರಪಾಲಿಕೆ ರವರು ವರದಿ ಮಾಡಿರುತ್ತಾರೆ.

4) ಶಿವಮೊಗ್ಗ ಮಹಾನಗರ ಪಾಲಿಕೆ:
ಶಿವಮೊಗ್ಗ ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಯಾವುದೇ ಗಂಭೀರ ಸಮಸ್ಯೆ ಇರುವುದಿಲ್ಲ. ಶಿವಮೊಗ್ಗ ನಗರಕ್ಕೆ 24/7 ಕುಡಿಯುವ ನೀರಿನ ಯೋಜನೆಯನ್ನು ಕ.ನ.ನೀಸ. & ಒ.ಚ. ಮಂಡಳಿ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಆಯುಕ್ತರು, ಶಿವಮೊಗ್ಗ ಮಹಾನಗರಪಾಲಿಕೆ ರವರು ವರದಿ ಮಾಡಿರುತ್ತಾರೆ.

5) ವಿಜಯಪುರ ಮಹಾನಗರ ಪಾಲಿಕೆ:
ವಿಜಯಪುರ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರಸ್ತುತ ಕುಡಿಯುವ ನೀರಿನ ಸಮಸ್ಯೆ ಇರುವುದಿಲ್ಲ.

- ವಿಜಯಪುರ ಮಹಾನಗರಪಾಲಿಕೆಗೆ 2011-12ನೇ ಸಾಲಿನಲ್ಲಿ ಗುಲ್ಬರ್ಗಾ ಸಚಿವ ಸಂಪುಟ ಅನುದಾನದಲ್ಲಿ 10 ಎಂ.ಎಲ್.ಡಿ. ಸಾಮರ್ಥ್ಯದ ನೀರು ಶುದ್ಧೀಕರಣ ಘಟಕ ರೂ.804.61 ಲಕ್ಷಗಳಿಗೆ ಅನುಮೋದನೆಯಾಗಿರುತ್ತದೆ.
- ಮಾನ್ಯ ಮುಖ್ಯಮಂತ್ರಿಗಳ ರೂ.100.00ಕೋಟಿ ವಿಶೇಷ ಅನುದಾನದ ಹಂತ-3ರ ಅನುದಾನದಲ್ಲಿ 10ಎಂ.ಎಲ್.ಡಿ. ಸಾಮರ್ಥ್ಯದ ನೀರು ಶುದ್ಧೀಕರಣ ಘಟಕ ರೂ.695.39 ಲಕ್ಷಗಳಿಗೆ ಅನುಮೋದನೆಯಾಗಿರುತ್ತದೆ.
- ಅಮೃತ ಯೋಜನೆಯ, ಮೂಲ ಅನುದಾನದಡಿ ವಿಜಯಪುರ ನಗರದಲ್ಲಿ ಬರುವ 15 ಝೋನ್‌ಗಳಿಗೆ ನಿರಂತರ ಒತ್ತಡಯುಕ್ತ ನೀರು ಸರಬರಾಜು ಮಾಡುವ ಕಾಮಗಾರಿ ವೆಚ್ಚ ರೂ.156.00 ಕೋಟಿಗಳು ಪ್ರಗತಿಯಲ್ಲಿರುತ್ತದೆ.
- ಅಮೃತ ಯೋಜನೆಯ, ಹೆಚ್ಚುವರಿ ಅನುದಾನದಡಿ, ವಿಜಯಪುರ ನಗರದಲ್ಲಿ ಬರುವ 2 ಝೋನ್‌ಗಳಿಗೆ ನಿರಂತರ ಒತ್ತಡಯುಕ್ತ ನೀರು ಸರಬರಾಜು ಮಾಡುವ ಕಾಮಗಾರಿ ವೆಚ್ಚ ರೂ. 21.98 ಕೋಟಿಗಳು ಪ್ರಗತಿಯಲ್ಲಿರುತ್ತದೆ.

ವಿಜಯಪುರ ನಗರಕ್ಕೆ ಕೃಷ್ಣಾ ನದಿಯಿಂದ (ಆಲಮಟ್ಟಿ ಜಲಾಶಯದ ಹಿನ್ನೀರು) ನೀರು ಸರಬರಾಜು ಮಾಡುವ 2ನೇ ಹಂತದ ನೀರು ಸರಬರಾಜು ವ್ಯವಸ್ಥೆಯ ಸಗಟು ನೀರು ಸರಬರಾಜನ್ನು ಅಭಿವೃದ್ಧಿಗೊಳಿಸುವ ಕಾಮಗಾರಿ ವೆಚ್ಚ ರೂ.32.00 ಕೋಟಿಗಳು ಇದ್ದು, ಈ ಅಂದಾಜು ಪಟ್ಟಿಯನ್ನು ಮಂಡಳಿಯ ಪತ್ರ ಸಂಖ್ಯೆ: 2362, ದಿನಾಂಕ: 16-12-2019ರಲ್ಲಿ ಸರ್ಕಾರಕ್ಕೆ ಆಡಳಿತಾತ್ಮಕ ಅನುಮೋದನೆಗಾಗಿ ಸಲ್ಲಿಸಲಾಗಿದೆ ಮತ್ತು ಸರ್ಕಾರದ ಪತ್ರ ಸಂಖ್ಯೆ: ನಇ/2/ ಯುಡಬ್ಲ್ಯೂಎಸ್/ 2020 ದಿನಾಂಕ: 20-03-2020 ರಲ್ಲಿನ ನಿರ್ದೇಶನದಂತೆ ಸ್ಥಳೀಯ ಸಂಸ್ಥೆಯಿಂದ ಠರಾವನ್ನು ಪಡೆದು ಮಂಡಳಿ ಪತ್ರ ಸಂಖ್ಯೆ:371 ದಿನಾಂಕ: 15-06-2020ರಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದು ಆಯುಕ್ತರು, ವಿಜಯಪುರ ಮಹಾನಗರಪಾಲಿಕೆ ರವರು ವರದಿ ಮಾಡಿರುತ್ತಾರೆ.

6) ಬಳ್ಳಾರಿ ಮಹಾನಗರ ಪಾಲಿಕೆ:

ಬಳ್ಳಾರಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರಸ್ತುತ ಕುಡಿಯುವ ನೀರಿನ ಸಮಸ್ಯೆ ಇರುವುದಿಲ್ಲ.

- ಬಳ್ಳಾರಿ ನಗರಕ್ಕೆ ನಿರಂತರ ನೀರು ಸರಬರಾಜು ಯೋಜನೆಯ ಎ.ಡಿ.ಬಿ. ಯೋಜನೆ ಅಡಿಯಲ್ಲಿ ರೂ.90.55 ಕೋಟಿಗಳಿಗೆ ಮಂಜೂರಾಗಿದ್ದು, ಒಟ್ಟು 464.6 ಕಿ.ಮೀ ಗಳಷ್ಟು ಉದ್ದದ ಪೈಪ್ ಲೈನ್ ಹಾಗು 44955 ಸಾವಿರ ಮನೆಗಳಿಗೆ ಸಂಪರ್ಕ ಒದಗಿಸಿ ಈ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.
- ಪಸ್ತುತ 368 ಕಿ.ಮೀ ಗಳಷ್ಟು ಪೈಪು ಹಾಕಲಾಗಿದ್ದು ಹಾಗೂ 26538 ಮನೆಗಳಿಗೆ ನಳಸಂಪರ್ಕ ಒದಗಿಸಲಾಗಿದೆ. ಡಿಸೆಂಬರ್ 2020ಕ್ಕೆ ಪೂರ್ಣಗೊಳಿಸಬೇಕಾಗಿರುತ್ತದೆ. ಈಗಾಗಲೇ 12 ವಲಯಗಳಲ್ಲಿ ನೀರು ಸರಬರಾಜು ಮಾಡಲಾಗುತ್ತಿದ್ದು, ಇನ್ನು 4 ವಲಯಗಳಲ್ಲಿ ಟ್ರಯಲ್ ರನ್ ಮಾಡಲಾಗುತ್ತಿದೆ. ಒಟ್ಟು 28 ವಲಯಗಳು ಮಾರ್ಚ್ ಅಂತ್ಯದಲ್ಲಿ 45955 ಮನೆಗಳಿಗೆ ನೀರು ಸರಬರಾಜು ಪೂರ್ಣಗೊಳಿಸಲಾಗುತ್ತದೆ.
- ಬಾಕಿ ಉಳಿದ 15 ವಲಯಗಳಲ್ಲಿ ಈಗಿರುವ ಎಲ್ಲಾ ಮನೆಗಳನ್ನು ಪರಿಗಣನೆಗೆ ತೆಗೆದುಕೊಂಡು ನಗರದ ಎಲ್ಲಾ ಭಾಗಕ್ಕೂ 24X7 ಯೋಜನೆಯನ್ನು ವಿಸ್ತರಿಸುವುದು ಅವಶ್ಯವಿರುತ್ತದೆ. ಈ ನಿಟ್ಟಿನಲ್ಲಿ ಕ.ನ.ನೀ.ಸ ಮತ್ತು ಒ.ಚ ಮಂಡಳಿಗೆ ಯೋಜನಾ ವರದಿಯನ್ನು ತಯಾರಿಸಲು ತಿಳಿಸಲಾಗಿರುತ್ತದೆ. ಇದಕ್ಕಾಗಿ ಮುಂದುವರೆದು, ಬೇರೆ ಯೋಜನೆ ಅಡಿ ರೂ.22.5 ಕೋಟಿ ಹಣವನ್ನು ಕಾಯ್ದಿರಿಸಬೇಕಿರುತ್ತದೆ.
- ತುಂಗಭದ್ರಾ ಜಲಾಶಯದಿಂದ ಬಳ್ಳಾರಿ ನಗರಕ್ಕೆ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸುವ ಯೋಜನೆಯ ನಕ್ಷೆ ವಿನ್ಯಾಸ ಮತ್ತು ಅಂದಾಜು ಪಟ್ಟಿಯನ್ನು ತಯಾರಿಸುವ ಕಾಮಗಾರಿ ವಹಿಸಿದ್ದು, ಪ್ರಸ್ತುತ ಸರ್ವೆ ಕಾಮಗಾರಿ ಪೂರ್ಣಗೊಂಡಿದ್ದು, Feasibility reportನ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಮುಂದುವರೆದು ವಿಸ್ತೃತ ಅಂದಾಜು ಪಟ್ಟಿಯನ್ನು ತಯಾರಿಸುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ ಎಂದು ಆಯಕ್ತರು, ಬಳ್ಳಾರಿ ಮಹಾನಗರಪಾಲಿಕೆ ರವರು ವರದಿ ಮಾಡಿರುತ್ತಾರೆ.

7) ತುಮಕೂರು ಮಹಾನಗರಪಾಲಿಕೆ:

ಪ್ರಸ್ತುತ ಸಂದರ್ಭದಲ್ಲಿ ತುಮಕೂರು ಮಹಾನಗರ ಪಾಲಿಕೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದಿಲ್ಲ. ಮುಂದುವರಿದು, ಈ ಕೆಳಕಂಡ ಶಾಶ್ವತ ಮಾದರಿಯ ಕುಡಿಯುವ ನೀರಿನ ಯೋಜನೆಗಳನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿದೆ.

- ತುಮಕೂರು ನಗರಕ್ಕೆ ಯು.ಐ.ಡಿ.ಎಸ್.ಎಂ.ಟಿ ಯೋಜನೆಯಡಿ ನಿರಂತರ ನೀರು ಸರಬರಾಜು ಯೋಜನೆಯನ್ನು ರೂ. 198.98 ಕೋಟಿಗಳ ಅಂದಾಜು ಮೊತ್ತದಲ್ಲಿ ಕೈಗೊಂಡಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.
- ತುಮಕೂರು ನಗರಕ್ಕೆ ಅಮೃತ್ ಯೋಜನೆಯಡಿ ನೀರು ಸರಬರಾಜು ಮಾಡುವ ಯೋಜನೆಯನ್ನು ಒಟ್ಟು ರೂ.113.16 ಕೋಟಿಗಳ ಅಂದಾಜು ಮೊತ್ತದಲ್ಲಿ ಕೈಗೊಂಡಿದ್ದು ಕಾಮಗಾರಿ ಪ್ರಗತಿಯಲ್ಲಿದೆ.
- ತುಮಕೂರು ನಗರದ ಕುಡಿಯುವ ನೀರು ಸರಬರಾಜು ಸುಧಾರಣೆಗೆ ತುಮಕೂರು ಸ್ಮಾರ್ಟ್ ಸಿಟಿ ನಿಯಮಿತದ ಕೊಡುಗೆ ಯೋಜನೆಯಡಿ ರೂ. 56.55 ಕೋಟಿಗಳ ಅಂದಾಜು ಮೊತ್ತದಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ.
- ತುಮಕೂರು ನಗರದ ಕುಡಿಯುವ ನೀರು ಸರಬರಾಜು ಸುಧಾರಣೆಗೆ ತುಮಕೂರು ಸ್ಮಾರ್ಟ್ ಸಿಟಿ ನಿಯಮಿತದ ಕೊಡುಗೆ ಯೋಜನೆಯಡಿ ರೂ. 11.00 ಕೋಟಿಗಳ ಅಂದಾಜು ಮೊತ್ತದಲ್ಲಿ ಗಂಗಸಂದ್ರ ಮತ್ತು ಮರಳೂರು ಕೆರೆಗಳನ್ನು ತುಂಬಿಸಿಕೊಳ್ಳುವ ಕಾಮಗಾರಿಗೆ ಅನುಮೋದನೆ ದೊರೆತಿದೆ.

8) ದಾವಣಗೆರೆ ಮಹಾನಗರ ಪಾಲಿಕೆ:

ದಾವಣಗೆರೆ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಪ್ರಸ್ತುತ ಸಂದರ್ಭದಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುತ್ತದೆ.

- ದಾವಣಗೆರೆ ಜನತೆಗೆ ಕುಡಿಯುವ ನೀರಿನ ಪೂರೈಕೆಯನ್ನು ಮಹಾನಗರ ಪಾಲಿಕೆ ವತಿಯಿಂದ ನಿರ್ವಹಿಸುತ್ತಿದ್ದು, ರಾಜನಹಳ್ಳಿ ಪಂಪ್ ಹೌಸ್, ಟಿ.ವಿ.ಸ್ಟೇಷನ್ ಕೆರೆ ಪಂಪ್ ಹೌಸ್, ಬಾತಿ ಪಂಪ್ ಹೌಸ್ ಅಲ್ಲದೇ ಕುಂದುವಾಡ ಪಂಪ್ ಹೌಸ್‌ನಿಂದ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಜನ ಸಂಖ್ಯೆಗೆ ಅನುಗುಣವಾಗಿ ಈ ಹಿಂದೆ ಪಂಪ್‌ಗಳನ್ನು ನೀರು ಏರು ಕೊಳವೆಗಳನ್ನು ಹಾಗೂ ವಿತರಣಾ ಕೊಳವೆಗಳನ್ನು ವಿನ್ಯಾಸ ಮಾಡಲಾಗಿದೆ. ಬಹಳಷ್ಟು ಪಂಪ್‌ಹೌಸ್‌ಗಳಲ್ಲಿ ಹಳೆಯದಾದ ಸುಮಾರು 15 ವರ್ಷಗಳಿಂದ ಕಾರ್ಯ ನಿರ್ವಸುತ್ತಿರುವ ಪಂಪ್‌ಗಳಿದ್ದು, ಅವುಗಳ ಕಾರ್ಯಕ್ಷಮತೆ ಕ್ಷೀಣಿಸಿದೆ. ಪಾಲಿಕೆಯಲ್ಲಿ ನಿರ್ಮಿಸಿರುವ 32 ನೀರಿನ ಮೇಲ್ತೊಟ್ಟಿಗಳು (ಇ.ಹೆಚ್.ಟಿ) ಕಡಿಮೆ ಇವೆ. ಪೈಪ್‌ಲೈನ್‌ಗಳನ್ನು ಹೆಚ್ಚುವರಿಯಾಗಿ ಮಾಡಿರುವುದಿಲ್ಲ. ಅಲ್ಲದೇ ಪೂರೈಸುತ್ತಿರುವ ನೀರಿನ ಹೆಚ್ಚು ಭಾಗ ಸೋರುವಿಕೆ ಎವಾ ಪೋರೇಷನ್ ಹಾಗೂ ದುರ್ಬಳಕೆಯಿಂದ ಮಹಾನಗರ ಪಾಲಿಕೆ ಜನತೆಗೆ ಪ್ರತಿದಿನ ಪೂರ್ಣ ಪ್ರಮಾಣದ ನೀರನ್ನು ಪೂರೈಸಲು ಸಾಧ್ಯವಾಗುತ್ತಿಲ್ಲ.

* ಈ ಸಮಸ್ಯೆಗೆ ಪರಿಹಾರ ಕಲ್ಪಿಸಲು ಕರ್ನಾಟಕ ರಾಜ್ಯದ ಅಂಗ ಸಂಸ್ಥೆಗಳಾದ ಕೆಯುಐಡಿಎಫ್‌ಸಿ ಹಾಗು KIUWMIP ವತಿಯಿಂದ ಪ್ಯಾಕೇಜ್ ನಂ.0.1 ಡಬ್ಲ್ಯೂ ಎಸ್-05 ಯೋಜನೆಯಂತೆ ಹಾಲಿ ಇರುವ ವಿದ್ಯುತ್ ಸ್ಥಾವರಗಳ ಮತ್ತು ಪಂಪ್‌ಗಳ ಜಲ ಸಂಗ್ರಾಹಾರದ ನೀರಿನ ಮೇಲ್ತೊಟ್ಟಿ (ಒಹೆಚ್‌ಟಿ) ಹಾಗೂ ನೆಲ ಮಟ್ಟದ ನೀರಿನ ಟ್ಯಾಂಕ್ ಪುನಶ್ಚೇತನ ಯೋಜನೆಯನ್ನು ಹಾಗೂ ಹೆಚ್ಚುವರಿ 18 ನೀರಿನ ಮೇಲ್ತೊಟ್ಟಿಗಳನ್ನು (ಒಹೆಚ್‌ಟಿ) ನಿರ್ಮಿಸಿ 24X7 ಪ್ರತಿ ಮನೆಗೆ ನೀರು ಪೂರೈಸಲು ಅನುಮೋದಿಸಿರುವಂತೆ ರೂ.50.99 ಕೋಟಿಗಳ ಕ್ರಿಯಾ ಯೋಜನೆಯು ಮಂಜೂರಾಗಿದ್ದು ಕಾಮಗಾರಿಯು ಪ್ರಗತಿಯಲ್ಲಿದ್ದು, ಜನವರಿ-2022 ರೊಳಗೆ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳ್ಳಲಿದೆ ಎಂದು ಆಯುಕ್ತರು, ದಾವಣಗೆರೆ ಮಹಾನಗರಪಾಲಿಕೆ ರವರು ವರದಿ ಮಾಡಿರುತ್ತಾರೆ.

9) ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ:

ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಕುಡಿಯುವ ನೀರು ಪೂರೈಕೆಗೆ ಪ್ರಸ್ತುತವಾಗಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿರುತ್ತದೆ.

* ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಕುಡಿಯುವ ನೀರಿಗಾಗಿ ಮಲಪ್ರಭಾ ಜಲಾಶಯದಿಂದ ಸಗಟ ನೀರು ಸರಬರಾಜು ಬಲವರ್ಧನೆಗಾಗಿ ರೂ.26.00 ಕೋಟಿಗಳಿಗೆ ಕಾಮಗಾರಿಯನ್ನು ಕೈಗೊಂಡು ಪೂರ್ಣಗೊಳಿಸಿ ಲೋಕಾರ್ಪಣೆ ಮಾಡಲಾಗಿರುತ್ತದೆ.
* 3ನೇ ಹಂತದ ರೂ 100 ಕೋಟಿ ನಗರೋತ್ಥಾನ ಅನುದಾನದಲ್ಲಿ ರೂ. 40 ಕೋಟಿಗಳ ಅನುದಾನವನ್ನು ಕೆಯುಐಡಿಎಫ್‌ಸಿ ವತಿಯಿಂದ ಅನುಷ್ಠಾನವಾಗುತ್ತಿರುವ ವಿಶ್ವಬ್ಯಾಂಕ್ ನೆರವಿನ "ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ" (ಕೆಯುಡಬ್ಲ್ಯೂಎಸ್‌ಎಂಪಿ) ಮಂಜೂರಾಗಿದ್ದು, ವಂತಿಕೆಯ ರೂ. 40 ಕೋಟಿಗಳ ಅನುದಾನವನ್ನು ಸಂದಾಯ ಮಾಡಲು ಕ್ರಮವಹಿಸಲಾಗಿರುತ್ತದೆ.
* ವಿಶ್ವಬ್ಯಾಂಕ್ ನೆರವಿನ "ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ"(ಕೆಯುಡಬ್ಲ್ಯೂಎಸ್‌ಎಂಪಿ)ಯಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿ ಪ್ರದೇಶಗಳಿಗೆ ವಿನ್ಯಾಸ-ನಿರ್ಮಾಣ-ಕಾರ್ಯಾಚರಣೆ ಮತ್ತು ನಿರ್ವಹಣೆ-ವರ್ಗಾವಣೆ (DBOT) ಮಾದರಿಯಲ್ಲಿ ಪರಿಣಾಮಕಾರಿ ವೆಚ್ಚದೊಳಗೆ ನಿರಂತರ (24x7) ಒತ್ತಡ ಸಹಿತ ನೀರು ಸರಬರಾಜು ವ್ಯವಸ್ಥೆಯ ಸುಸ್ಥಿರ ಉನ್ನತೀಕರಣ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರಿ ಆದೇಶ ಸಂಖ್ಯೆ: ನಅಇ 96 ಪಿಆರ್‌ಜೆ 2020 ದಿನಾಂಕ: 26.03.2020 ರನ್ವಯ ಮೆ॥ ಎಲ್ & ಟಿ ಲಿಮಿಟೆಡ್, ಚೆನ್ನೈ ರವರಿಗೆ ಮಂಜೂರಾಗಿದ್ದು, ಕೆಯುಐಡಿಎಫ್‌ಸಿ ವತಿಯಿಂದ ಕಾರ್ಯಾದೇಶವನ್ನು ಜೂನ್-2020 ರಲ್ಲಿ ನೀಡಲಾಗಿರುತ್ತದೆ. ಸದರಿ ಕಾಮಗಾರಿಯ ಅನುಷ್ಠಾನ ಅವಧಿ ಐದು ವರ್ಷವಾಗಿದ್ದು, ನಂತರದ 7 ವರ್ಷಗಳ ಅವಧಿಯ ಕಾರ್ಯಾಚರಣೆ ಹಾಗೂ ನಿರ್ವಹಣೆ ಜವಾಬ್ದಾರಿಯನ್ನೂ Design-Build-Operate-Transfer (DBOT) ಗುತ್ತಿಗೆದಾರರು ನಿರ್ವಹಿಸಬೇಕಿರುತ್ತದೆ ಎಂದು ಅಧೀಕ್ಷಕ ಅಭಿಯಂತರರು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ರವರು ವರದಿ ಮಾಡಿರುತ್ತಾರೆ.

10) ಮಂಗಳೂರು ಮಹಾನಗರ ಪಾಲಿಕೆ:

ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಪ್ರಸ್ತುತ ಕುಡಿಯುವ ನೀರಿನ ಸಮಸ್ಯೆ ಇರುವುದಿಲ್ಲ. ತಾಂತ್ರಿಕ ಸಮಸ್ಯೆಗಳಿಂದ ಕುಡಿಯುವ ನೀರಿನ ತೊಂದರೆ ಉಂಟಾದಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಿ ಸಾರ್ವಜನಿಕರಿಗೆ ಕುಡಿಯುವ ನೀರಿನ ತೊಂದರೆ ಉಂಟಾಗದಂತೆ ಕ್ರಮ ವಹಿಸಲಾಗುತ್ತಿದೆ.

ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ರೂ.792.42 ಕೋಟಿಗಳ ವೆಚ್ಚದಲ್ಲಿ (24x7) ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯನ್ನು KIUWMIP ಯಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ಇದರಲ್ಲಿ ಕಾಮಗಾರಿಗಳ ವೆಚ್ಚ ರೂ.587.67 ಕೋಟಿಗಳಾಗಿದ್ದು 8 ವರ್ಷಗಳ ಅವಧಿಯ ಕಾರ್ಯಾಚರಣೆ ಮತ್ತು ನಿರ್ವಹಣೆಯ ವೆಚ್ಚ ರೂ.204.75 ಕೋಟಿಗಳು ಆಗಿರುತ್ತದೆ ಎಂದು ಮಂಗಳೂರು ಮಹಾನಗರ ಪಾಲಿಕೆ ರವರು ವರದಿ ಮಾಡಿರುತ್ತಾರೆ.

ಮುಖ್ಯ ಅಭಿಯಂತರರು (ಪ್ರ)
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು.

Annexure--3

Workwise Progress of 100Cr Phase3 water supply works

S.No	Town Name	Work Name	Contractor/Entrusted Agency Name	Estimate Cost	Expenditure Cost	Work Status
1	Ballari	Laying of pipeline from allipur pump house to allipur reserverior from chainage no 2250 to 2900 for storage of water and fixing 3 nos of 250HP Motor in Ballari City Limtis	KUWS&DB	408	408	Work Completed
2	Ballari	AMRUT Contibution in 3rd Phase	KUWS&DB	1643	1600	Work Completed
3	Ballari	CONSTRUCTION OF 15 LAKHS LITERS CAPACITY O H T NEAR MOTI TALAKIES CIRCLE IN BALLARI CITY		200	0	Tender to be Invited
4	Ballari	CONSTRUCTION OF 10 LAKHS LITERS CAPACITY O H T NEAR T B SANITORIUM IN BALLARI CITY		135	0	Tender to be Invited
5	Ballari	PROVIDING OF WATER SUPPLY TO OLD MUNDRIGIASHRAYA LAYOUT AND NEW ASHRAYA LAYOUT IN BALLARI CITY		450	0	Tender to be Invited
6	Ballari	CONSTRUCTION OF PERMENT BUND TO ALLIPUR WATER RESORVIOR IN BALLARI CITY	KRIDL	75	75	Work Completed
7	Hubballi-Dharawad	Under the Karnataka Urban Water Supply Modernisation Scheme, Extension of 24X7 Water Supply Program to all the areas of Hubli-Dharwad Municipal Corporation	KUIDFC/KUWSMP deposit contribution	4000	3000	Work Completed
8	Kalaburagi	P-21 Provision for land acquisition for Construction of 50 MLD capacity water treatment plan at salaam Tekdi under 24/7 Water Supply scheme to Gulbarga City	-	300	147	Work Completed
9	Kalaburagi	P-34 Amount reserved for 24/7 Water Supply to Gulbarga Ctiy	KUIDFC	4000	0	Work Started
10	Mangaluru	Amount Deposited to KUIDFC towards ADB 2	KUIDFC	3000	3049.62	Work Completed

Annexure-5

Workwise Progress of 100Cr Phase3 water supply works

S.No	Town Name	Work Name	Contractor/Entrusted Agency Name	Estimate Cost	Expenditure Cost	Work Status
11	Mysuru	Constn. of HLT of 10.00 lakh ltr. capacity at Ward-24, Telecom layout	M.N Ramesh	94	94	Work Completed
12	Mysuru	Constn. of HLT of 10.00 lakh ltr. capacity at Alanahalli near Nandini layout	M.N Ramesh	94	94	Work Completed
13	Mysuru	Constn. of HLT of 10.00 lakh ltr. capacity at Ward-40, Kantharaja Urs park	M N Ramesh	94	94	Work Completed
14	Mysuru	Constn. of HLT of 10.00 lakh ltr. capacity at Ward-39 near Sultan park	M N Ramesh	94	45.45	Work Completed
15	Mysuru	Constn. of HLT of 10.00 lakh ltr. capacity at N.R. Mohalla, Shivaji park	M N Ramesh	94	0	Work Completed
16	Mysuru	Constn. of HLT of 10.00 lakh ltr. capacity at Bannimantap Balbhavan premises	M N Ramesh	94	94	Work Completed
17	Mysuru	Constn. of HLT of 10.00 lakh ltr. capacity at Kalyanagiri, Near KHB colony	M N Ramesh	94	94	Work Completed
18	Mysuru	Constn. of HLT of 10.00 lakh ltr. capacity at Ward-57, Near Vidyanagar	M N Ramesh	94	94	Work Completed
19	Mysuru	(1)Laying of 508mm MS pipe line from Ring road Parasaiahna hundi to J.P. Nagar HLT plant - 105.00	M.N.Ramesh	105	74.15	Work Completed
20	Mysuru	Providing Feeder main from German Press MBR to Nandini Layout 10 Lakhs Lts	J B Venkatesh	200	149.19	Work Completed
21	Mysuru	Construction of HLT in Vijaya Nagar CSR	contractor	94	53.9	Work Completed
22	Shivamogga	Reserved amount for Amruth Scheme		465	465	Work Completed
23	Shivamogga	PKG-(32-) 24 * 7 Water Supply Scheme KUWD&S Contribution Amount	KUWS&DB	600	538.16	Work Completed

Annexure-5
Workwise Progress of 100Cr Phase3 water supply works

S.No	Town Name	Work Name	Contractor/Entrusted Agency Name	Estimate Cost	Expenditure Cost	Work Status
24	Tumakuru	Development of 2 sides Drain in Kuppur jackwell	work cancel	40	0	Work Completed
25	Tumakuru	Supplyind of 2 Generators of 500 KVA in CMC pumphouse & Vidyanagar Pumphouse in Tumakuru City	N C Channakeshwa	87	89.88	Work Completed
26	Tumakuru	Deposit Amount to KUWDD&DB in UIDSSMT Scheme 24*7 for Water Supply	KUWSDB	1228	1228	Work Completed
27	Tumakuru	Construction of compound area of Water purification unit P.N. Palya and development road work (ndivir)	BYRAPPA	50	50	Work Completed
28	Vijapura	AMRUTH SCHEME contribution amount to KUWS & D board department (drinking water supply)	KUWS &D BOARD DEPARTMENT	1082.47	978.73	Work Completed
29	Vijapura	ವಿಜಯಪುರ ನಗರದ ಭೂತನಾಳ ಕೆರೆಯಲ್ಲಿ 10 ಎಂಎಲ್‌ಡಿ ಸಾಮರ್ಥ್ಯದ ನೀರು ಶುದ್ಧೀಕರಣ ಘಟಕ ನಿರ್ಮಿಸುವುದು	Water Board Vijaypur	695.39	132.95	Work Started
				19609.86	12649.03	

Chief Engineer, I/c
DMA

ಅನುಬಂಧ-4

Rs.in lakh

SFC DRINKING WATER PROGRAMME

Year				2018-19		2019-20	
SL.NO	District	Name Of the Town	ULB Type	Grants Allocation	Grants Released	Grants Allocation	Grants Released
1	Ballari	Ballari	CC	86 01	86 01	45 48	45 48
2	Belagavi	Belagavi	CC	86 01	86 01	35 48	35 48
3	Dakshin kanada	Mangaluru	CC	46 01	46 01	35 47	35 47
4	Davanagere	Davanagere	CC	46 01	46 01	35.48	35 48
5	Hubballi-Dharawad	Hubballi-Dharawad	CC	46 01	46 01	85 47	85 47
6	Kalaburagi	Kalaburagi	CC	86 01	86 01	50 48	50 48
7	Shivamogga	Shivamogga	CC	46 02	46 02	35 47	35.47
8	Tumakuru	Tumakuru	CC	86.01	86.01	45.48	45 48
9	Vijapura	Vijapura	CC	51 01	51.01	45.47	45.47
		TOTAL		579.1	579.1	414.28	414.28

M.V. [signature]

CHIEF PROJECT OFFICER
Urban Poverty Alleviation Management Unit
Directorate of Municipal Administration,
Bangalore